*ಸಂತರು ನಡೆದ ಹಾದಿ – ೨*

ಸಂಪಾದಕೀಯ



# ಗೀತಾಚಾರ್ಯನ ಸಂದೇಶ

ವಿಶ್ವಮಾನ್ಯವೂ, ಅತ್ಯಂತ ಜನಪ್ರಿಯವೂ, ಮನೆ-ಮನಗಳಲ್ಲಿ ನಿತ್ಯ ಪಠಿಸಲ್ಪಡುವ ಗ್ರಂಥವೂ ಆದ ಭಗವದ್ಗೀತೆಯ ವಿಚಾರವಾಗಿ ಯಾರಿಗೆ ತಿಳಿದಿಲ್ಲ? ಅದು ಶ್ರೀಕೃಷ್ಣನ ಉಪದೇಶ; ಅರ್ಜುನನಿಗೆ ಯುದ್ಧಭೂಮಿಯಲ್ಲಿ ಕೃಷ್ಣನು ಹೇಳಿದ ಮಾತುಗಳು; ಮಹಾಭಾರತ ಮಹಾಕಾವ್ಯದ ಒಂದು ಭಾಗ; ವೇದವ್ಯಾಸರು ರಚಿಸಿದ್ದು; ಹದಿನೆಂಟು ಅಧ್ಯಾಯಗಳಿಂದ ಕೂಡಿದ ಭಗವದ್ಗೀತೆ; ಇದಕ್ಕೆ ನೂರಾರು, ಸಾವಿರಾರು ಭಾಷ್ಯ-ವಿವರಣೆ-ವ್ಯಾಖ್ಯಾನಗಳಿವೆ — ಇಂತಹ ವಿವರಗಳನ್ನು ಎಲ್ಲರೂ ಬಲ್ಲರು. ಆದರೆ ಗೀತೆಯ ಅಂತರಂಗವನ್ನು ಹೊಕ್ಕು, ಅದರಲ್ಲಿ ಭಗವಂತನು ಹೇಳಿರುವ ಮಾತುಗಳ ಅಂತರಾರ್ಥವನ್ನು ಯಾರು ಆಳವಾಗಿ ಅರಿತುಕೊಳ್ಳಬಲ್ಲರೋ ಅವರೇ ಧನ್ಯರು. ಕಾರಣ, ಗೀತೆಯಲ್ಲಿ ಬರುವ ಭಾವನೆಗಳು ನಮ್ಮನ್ನು ತಟ್ಟಿದರೆ, ಇನ್ನು ನಾವು ಸುಮ್ಮನಿರಲಾಗದು, ನಮ್ಮ ಬದುಕಿನಲ್ಲಿ ಅವು ವ್ಯಕ್ತಗೊಳ್ಳಲೇಬೇಕು. ಒಂದಲ್ಲ ಒಂದು ರೀತಿ ಅವನ್ನು ನಾವು ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಲೇಬೇಕು. ಇಷ್ಟೊಂದು ಪ್ರಭಾವಶಾಲಿಯಾದ, ಇಡೀ ಬದುಕನ್ನೇ ಬದಲಾಯಿಸಬಲ್ಲ, ನಮ್ಮ ಜೀವನಕ್ಕೆ ಒಂದು ಹೊಸ ಬೆಳಕನ್ನೇ ನೀಡಬಲ್ಲ ಗೀತೆಯ ಪ್ರಧಾನ ಭಾವನೆಗಳು ಯಾವುವು?

ಗೀತೆಯನ್ನು ಹಲವು ಭಾವನೆಗಳ ಸಮುದ್ರವೆನ್ನಬಹುದು. ಅವುಗಳಲ್ಲಿ ಕೆಲವನ್ನು ಮಾತ್ರ ನಾವೀಗ ಗಮನಿಸೋಣ.

## ಕರ್ಮಮಾರ್ಗ

ಹಿಂದೂ ಸಂಸ್ಕೃತಿಯಲ್ಲಿ ಹಿಂದೆಂದೂ ಕಂಡು ಬಂದಿಲ್ಲದ ಈ ಆಧ್ಯಾತಿಕ ಮಾರ್ಗವನ್ನು ನಾವು ಭಗವದ್ಗೀತೆಯಲ್ಲಿ ನೋಡುತ್ತೇವೆ. ವೇದ, ಉಪನಿಷತ್ತು ಪುರಾಣಗಳಲ್ಲಿ ನಮಗೆ ಕೆಲವು ಸೂಚನೆಗಳು ಮಾತ್ರ ಸಿಗುತ್ತವೆ. ಉದಾಹರಣೆಗೆ, ಈಶಾವಾಸ್ಯೋಪನಿಷತ್ತಿನಲ್ಲಿ, 'ಕರ್ಮವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ' (ಈ ಪ್ರಪಂಚದಲ್ಲಿ ಕರ್ಮಗಳನ್ನು ಮಾಡುತ್ತಾ ನೂರು ವರ್ಷಗಳ ಕಾಲ ಬದುಕುವ ಇಚ್ಛೆಯನ್ನು ಹೊಂದಿರಬೇಕು) ಎಂಬ ವಿಚಾರ ಬರುತ್ತದೆ. ಅದೇ ರೀತಿ, ಗೀತೆಯಲ್ಲೇ ಹೇಳಿರುವಂತೆ, ಹಿಂದೆ ಜನಕನೇ ಮೊದಲಾದವರು ಕರ್ಮಮಾರ್ಗವನ್ನು ಅನುಸರಿಸಿಯೇ ಸಿದ್ಧಿಯನ್ನು ಪಡೆದರು ಎನ್ನಲಾಗಿದೆ. ಆದರೆ ಕರ್ಮವನ್ನು ಒಂದು ಆಧ್ಯಾತ್ಮಿಕ ಸಾಧನೆಯಾಗಿ, ವಿಶಾಲವಾದ ಅರ್ಥದಲ್ಲಿ ವಿವರಿಸಿ ಹೇಳಿರುವ ಗ್ರಂಥ ಬೇರೊಂದಿಲ್ಲ. ಗೀತೆಯಲ್ಲಿ ಕೂಡ ಕೆಲವೆಡೆ 'ಕರ್ಮ' ಎಂದರೆ ಯಜ್ಞಕರ್ಮಗಳು ಎಂಬರ್ಥವಿದೆ. ಇದನ್ನೇ ಅನುಸರಿಸಿ ಭಾಷ್ಯಕಾರರು ಕರ್ಮವೆಂದರೆ ಯಜ್ಞಯಾಗಾದಿ ಕರ್ಮಗಳು ಎಂದೇ ವಿವರಿಸಿದ್ದಿದೆ. ಆದರೆ ಗೀತೆಯಲ್ಲೇ ಅನೇಕ ಸಂದರ್ಭಗಳಲ್ಲಿ ಕರ್ಮವೆಂದರೆ ಕೇವಲ ಯಜ್ಞಯಾಗಾದಿಗಳಷ್ಟೇ ಅಲ್ಲ; ಸಮಸ್ತ ಕರ್ಮಗಳು-ಕೆಲಸಕಾರ್ಯಗಳು ಎಂಬ ಅರ್ಥ ಬರುತ್ತದೆ. ಅಷ್ಟೇಕೆ, 'ಯಜ್ಞ' ಎಂಬ ಪದಕ್ಕೂ ಕೇವಲ ಯಾಗಯಜ್ಞಗಳು ಎಂಬ ನಿರ್ದಿಷ್ಟ ಅರ್ಥವನ್ನು ದಾಟಿ, 'ಜೀವನದ ಸಮಸ್ತ ಕ್ರಿಯೆಗಳೂ ಒಂದು ಯಜ್ಞ; ವಿಶ್ವವ್ಯಾಪಾರದಲ್ಲಿ ನಾವೆಲ್ಲರೂ ಮಾಡಬೇಕಾದ, ಮಾಡುತ್ತಿರುವ ಸಮರ್ಪಣೆ' ಎಂಬ ವಿಶಾಲ ಅರ್ಥವನ್ನು ಹೇಳಲಾಗಿದೆ. ಆದ್ದರಿಂದ, ಈ ರೀತಿ ಗೀತೆಯ ಕರ್ಮಮಾರ್ಗವನ್ನು ಒಂದು ಹೊಸ ಆಧ್ಯಾತ್ಮಿಕ ಮಾರ್ಗವಾಗಿ, ಪರಿಗಣಿಸಬೇಕು; ಶ್ರೀಕೃಷ್ಣ ಪರಮಾತ್ಮನು ಮನುಕುಲಕ್ಕೆ ನೀಡಿದ ಒಂದು ಕೊಡುಗೆಯೆಂದೇ ಪರಿಭಾವಿಸಬೇಕು.

ಗೀತೆಯ ೨, ೩, ೪ನೇ ಅಧ್ಯಾಯಗಳಲ್ಲಿ ಕರ್ಮಯೋಗದ ವಿಚಾರಗಳು ಬರುತ್ತವೆ. ಅವುಗಳ ಸಾರವನ್ನು ಹೀಗೆ ಸಂಗ್ರಹಿಸಬಹುದು: ಕರ್ಮ ಅಥವಾ ಕ್ರಿಯೆಯನ್ನು ಎಲ್ಲರೂ ಮಾಡಲೇಬೇಕು. ಕರ್ಮವನ್ನು ಮಾಡದೆ ಒಂದು ಕ್ಷಣವೂ ಇರಲಾಗದು. ಶರೀರದ ಪೋಷಣೆಗಾಗಿಯಾದರೂ ಮನುಷ್ಯನು ಕೆಲಸ ಮಾಡಲೇಬೇಕು. ಆದರೆ ಕರ್ಮದೊಂದಿಗೆ ಯಾವಾಗಲೂ ಕೆಲವು ದೋಷಗಳು ಅಂಟಿಕೊಂಡಿರುತ್ತವೆ. ಕೆಲಸ ಮಾಡಿದ್ದರಿಂದ ಫಲ ಬಂದೇ ಬರುತ್ತದೆ. ಅದನ್ನು ನಾವು ಅನುಭವಿಸಲೇಬೇಕು. ಈ ಫಲ ಎರಡು ರೀತಿ – ಸುಖವನ್ನು ನೀಡಬಹುದು, ಅಥವಾ ದುಃಖವನ್ನು ನೀಡಬಹುದು. ಈ ಬಗೆಯ ಅನುಭವಗಳಿಂದ ನಾವು ಆಸೆಗೆ, ಸುಖಕ್ಕೆ ಬದ್ಧರಾಗಿರುತ್ತೇವೆ. ಕರ್ಮ, ಅದರ ಫಲ, ಸುಖದುಃಖಗಳಿಂದ ಕೂಡಿದ ಅನುಭವ, ಆಸೆ, ಆಸೆಯ ಪೂರೈಕೆಗೆ ಕರ್ಮ, ಮತ್ತೆ ಕರ್ಮಫಲ – ಈ ರೀತಿ ಕರ್ಮದ ಚಕ್ರದಲ್ಲಿ ಸಿಕ್ಕಿ ಹಾಕಿಕೊಳ್ಳುತ್ತೇವೆ. ಈ ಚಕ್ರವು ಜೀವನಪರ್ಯಂತ ನಮ್ಮನ್ನು ಮುನ್ನಡೆಸುತ್ತದೆ; ಮುಂದಿನ ಜನ್ಮಗಳಿಗೂ ಕಾರಣವಾಗುತ್ತದೆ. ಕರ್ಮದ ಹಿಡಿತದಿಂದ ತಪ್ಪಿಸಿಕೊಳ್ಳಲು ಒಂದೇ ಮಾರ್ಗ – ಆಸಕ್ತಿಯಿಲ್ಲದೆ ಕರ್ಮ ಮಾಡುವುದು. 'ಸುಖವನ್ನೇ ನೀಡಲಿ, ದುಃಖವನ್ನೇ ತರಲಿ–ನಾನು ಕರ್ಮ ಮಾಡುತ್ತೇನೆ. ಭಗವದರ್ಪಣೆ ಎಂಬ ರೀತಿ ಕೆಲಸ ಮಾಡುತ್ತೇನೆ. ನಾನು ಕರ್ಮಕ್ಕೆ ಅಂಟಿಕೊಳ್ಳದೆ, ಅದರ ಫಲವನ್ನು ಬಯಸದೆ ಕೆಲಸ ಮಾಡುತ್ತೇನೆ.' — ಈ ಭಾವನೆಯಿಂದ ನಾವು ಕರ್ಮದ ಬಂಧನದಿಂದ ಮುಕ್ತರಾಗುವೆವು. ಇದು ಕರ್ಮದ ಚಕ್ರದಿಂದ ನಮ್ಮನ್ನು ಬಿಡಿಸಿ, ನಮ್ಮನ್ನು ಭಗವಂತನ ಕಡೆಗೆ ಕರೆದೊಯ್ಯುವುದು. ಇದೇ ಕರ್ಮಯೋಗದ ಭಾವನೆ.

**ತ್ಯಕ್ತ್ವಾ ಕರ್ಮಫಲಾಸಂಗಂ ನಿತ್ಯತೃಪ್ತೋ ನಿರಾಶ್ರಯಃ ।**
**ಕರ್ಮಣ್ಯಭಿಪ್ರವೃತ್ತೋಽಪಿ ನೈವ ಕಿಂಚಿತ್ ಕರೋತಿ ಸಃ ॥**

*(ಗೀತೆ, ೪-೨೦)*

'ಕರ್ಮಫಲದಲ್ಲಿ ಆಸಕ್ತಿಯನ್ನು ಬಿಟ್ಟು, ನಿತ್ಯತೃಪ್ತನೂ ನಿರಾಶ್ರಯನೂ ಆಗಿ ಕರ್ಮದಲ್ಲಿ ಪ್ರವೃತ್ತನಾಗಿದ್ದರೂ, ಅವನು ಏನನ್ನು ಮಾಡುತ್ತಿಲ್ಲ.'

ಈ ಶ್ಲೋಕವು ಕರ್ಮಯೋಗದ ಸಾರವನ್ನೇ ವ್ಯಕ್ತಗೊಳಿಸುತ್ತದೆ.

ಗೀತೆಯಲ್ಲಿ ನಿರೂಪಿಸಿರುವ ಕರ್ಮಯೋಗವು ಒಂದು ಆಧ್ಯಾತ್ಮಿಕ ಮಾರ್ಗವಾಗಿ ಸ್ಪಷ್ಟವಾದ ರೂಪರೇಷೆಗಳನ್ನು ನೀಡಿದರೂ, ಅದನ್ನು ಅನುಷ್ಠಾನದಲ್ಲಿ ಸಾಧನೆಯ ಮಾರ್ಗವಾಗಿ ಅಳವಡಿಸಿಕೊಂಡ ಉದಾಹರಣೆ ನಮ್ಮಲ್ಲಿ ಕಂಡುಬರುವುದಿಲ್ಲ. ಬಹುಶಃ ಸುದೀರ್ಘ ಅವಧಿಯ ಪರಂಪರೆಯಲ್ಲಿ ಅದು ಎಲ್ಲೋ ಕಳೆದು ಹೋಗಿದ್ದಿರಬಹುದು. ಅದನ್ನು ಮತ್ತೆ ಅನುಷ್ಠಾನ ಮಾರ್ಗವಾಗಿ ರೂಢಿಗೆ ತಂದ ಕೀರ್ತಿ ಶ್ರೀರಾಮಕೃಷ್ಣರು ಹಾಗೂ ಸ್ವಾಮಿ ವಿವೇಕಾನಂದರಿಗೆ ಸಲ್ಲಬೇಕು. ಶ್ರೀರಾಮಕೃಷ್ಣರ 'ಶಿವಜ್ಞಾನೇ ಜೀವ ಸೇವಾ' ಎಂಬ ಮಾತಿನಿಂದಲೂ, ದೇವಘರ್‌ನಲ್ಲಿ ಜನರ ಕಷ್ಟವನ್ನು ಕಂಡು ಅವರಿಗೆ ಸೇವೆ ಮಾಡುವ ಸಂಕಲ್ಪ ಮಾಡಿದ್ದರಿಂದಲೂ ದೊರೆತ ಸೂಚನೆಯನ್ನು ಗ್ರಹಿಸಿದ ಸ್ವಾಮಿ ವಿವೇಕಾನಂದರು, ವೇದಾಂತದ ತತ್ತ್ವಗಳ ಆಧಾರದಲ್ಲಿ ಸೇವಾತತ್ತ್ವ ಹಾಗೂ ಕರ್ಮಯೋಗದ ಮಾರ್ಗವನ್ನು ಹೊಸದಾಗಿ ರೂಪಿಸಿದರು. ಅವರ 'ಕರ್ಮಯೋಗ' ಕೃತಿಯಲ್ಲಿ ಇದು ಸ್ಪಷ್ಟ ರೂಪವನ್ನು ತಳೆಯಿತು. ಈ ರೀತಿ ಶ್ರೀಕೃಷ್ಣ ಪರಮಾತ್ಮನ ಕರ್ಮಮಾರ್ಗ ಸ್ವಾಮೀಜಿಯವರಲ್ಲಿ ಪುನರುತ್ಥಾನವನ್ನೇ ಕಂಡಿತು ಎನ್ನಬೇಕು.

## ಜ್ಞಾನದ ಮಹತ್ವ

ವೇದಸಾಹಿತ್ಯದಲ್ಲೇ ನಾವು ಯಜ್ಞಯಾಗಾದಿಗಳನ್ನು ಮೀರಿ ಹೋಗಿ, ಜ್ಞಾನಕ್ಕೆ ಹೆಚ್ಚಿನ ಮಹತ್ವವುಂಟಾಗಿದ್ದುದನ್ನು ಕಾಣಬಹುದು. ಉಪನಿಷತ್ತುಗಳಲ್ಲೆಲ್ಲ ಜ್ಞಾನದಿಂದಲೇ ಮುಕ್ತಿಯುಂಟಾಗುವುದು; ಸ್ವರ್ಗವೇ ಮೊದಲಾದ ಲೋಕಗಳನ್ನು ದೊರಕಿಸಿಕೊಡುವ ಯಜ್ಞಯಾಗಾದಿಗಳಿಗಿಂತ ಆತ್ಮಸಾಕ್ಷಾತ್ಕಾರ ಅತ್ಯಧಿಕವಾದುದು; ಅದುವೇ ಮನುಷ್ಯನ ಅಂತಿಮಗುರಿ ಎನ್ನಲಾಗಿದೆ. ಇದನ್ನು ಭಗವದ್ಗೀತೆಯಲ್ಲಿ ಇನ್ನಷ್ಟು ಸ್ಪಷ್ಟವಾಗಿ ಹೇಳಲಾಗಿದೆ. 'ಜ್ಞಾನಯೋಗ'ವೆಂಬ ನಾಲ್ಕನೆಯ ಅಧ್ಯಾಯದಲ್ಲಿ ಜ್ಞಾನದ ಪಾರಮ್ಯವನ್ನು ವಿವರಿಸಲಾಗಿದೆ; ಅಷ್ಟೇ ಅಲ್ಲದೆ, ಉಳಿದ ಹಲವು ಅಧ್ಯಾಯಗಳಲ್ಲೂ ಜ್ಞಾನದ ಮಹತ್ವವನ್ನು ಎತ್ತಿ ಹಿಡಿಯಲಾಗಿದೆ. ವಿವೇಕ, ವಿಚಾರ, ವಿಶ್ಲೇಷಣೆ ಹಾಗೂ ನಿರ್ಣಯ – ಈ ಹಂತಗಳ ಜ್ಞಾನಪ್ರಕ್ರಿಯೆಯಿಂದ ಆತ್ಮಸಾಕ್ಷಾತ್ಕಾರವುಂಟಾಗುವುದು ಎಂಬುದನ್ನು ಗೀತೆಯಲ್ಲಿ ನಿರೂಪಿಸಲಾಗಿದೆ.

ಅಜ್ಞಾನವನ್ನು ತೊಲಗಿಸಿ, ಅರಿವಿನ ಬೆಳಕನ್ನು ನೀಡುವುದಷ್ಟೇ ಜ್ಞಾನದ ಕೆಲಸವಲ್ಲ; ಮಾನವನ ಜೀವನ ಪಯಣದಲ್ಲಿ ಅದು ಇನ್ನೊಂದು ಮಹತ್ತರವಾದ ಕೆಲಸವನ್ನೂ ಮಾಡುತ್ತದೆ – ಅದು ಸಮಸ್ತ ಪಾಪವನ್ನೂ, ಕರ್ಮದ ಬಂಧನವನ್ನೂ ಸುಟ್ಟುಹಾಕುತ್ತದೆ:

*(ಗೀತೆ. ೪.೩೬-೩೭)*

**ಅಪಿಚೇದಸಿ ಪಾಪೇಭ್ಯಃ ಸರ್ವೇಭ್ಯಃ ಪಾಪಕೃತ್ತಮಃ ।**
**ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ ॥**
**ಯಥೈಧಾಂಸಿ ಸಮಿದ್ಧೋಽಗ್ನಿರ್ಭಸ್ಮಸಾತ್ ಕುರುತೇಽರ್ಜುನ ।**
**ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ತಥಾ ॥**

'ನೀನು ಎಲ್ಲಾ ಪಾಪಿಗಳಿಗಿಂತಲೂ ಹೆಚ್ಚು ಪಾಪವನ್ನು ಮಾಡಿದ್ದರೂ ಆ ಸಮಸ್ತ ಪಾಪವೆಂಬ ಸಮುದ್ರವನ್ನು ಜ್ಞಾನವೆಂಬ ನಾವೆಯಿಂದಲೇ ದಾಟುವೆ.

'ಎಲೈ ಅರ್ಜುನ, ಚೆನ್ನಾಗಿ ಪ್ರಜ್ವಲಿಸುತ್ತಿರುವ ಅಗ್ನಿಯು ಕಟ್ಟಿಗೆಗಳನ್ನು ಹೇಗೆ ಸುಟ್ಟು ಬೂದಿಮಾಡುತ್ತದೆಯೋ ಹಾಗೆಯೇ, ಜ್ಞಾನವೆಂಬ ಅಗ್ನಿಯು ಕರ್ಮಗಳನ್ನೆಲ್ಲಾ ಭಸ್ಮಮಾಡಿಬಿಡುವುದು.'

ಇದು ಒಂದು ಹಂತದ ಕಾರ್ಯವಾದರೆ, ಮುಂದಿನ ಹಂತದಲ್ಲಿ ಶ್ರೀಕೃಷ್ಣ ಹೇಳುತ್ತಾನೆ, **'ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ'**– 'ಈ ಲೋಕದಲ್ಲಿ ಜ್ಞಾನಕ್ಕೆ ಸಮಾನವಾದ ಪವಿತ್ರವಸ್ತು ಬೇರೊಂದಿಲ್ಲ.' ಸಮಸ್ತ ಪಾವಿತ್ರ್ಯ, ಪರಿಶುದ್ಧತೆ ಎಲ್ಲವೂ ಜ್ಞಾನದಲ್ಲೇ ಅಡಕವಾಗಿದೆ. ಅಗ್ನಿಯಂತೆ ಪರಿಶುದ್ಧ ಜ್ಞಾನವು ಎಲ್ಲ ಕಶ್ಮಲ, ಪಾಪ, ಅಜ್ಞಾನಗಳನ್ನು ಸುಟ್ಟು ಬೂದಿ ಮಾಡುವುದು; ಪರಮಸತ್ಯವಾದ ಆತ್ಮತತ್ತ್ವವು ಅಂತರಂಗದಲ್ಲಿ ಪ್ರಜ್ವಲಿಸುವಂತೆ ಮಾಡುವುದು. ಆದ್ದರಿಂದಲೇ ಶ್ರೀಕೃಷ್ಣನು ಅರ್ಜುನನ ಮೂಲಕ ಸಮಸ್ತ ಮಾನವ ಸಂತತಿಗೆ ನೀಡುವ ಕರೆ ಇದು: *(ಗೀತೆ, ೪.೪೨)*

**ತಸ್ಮಾದಜ್ಞಾನಸಂಭೂತಂ ಹೃತ್ಸ್ಥಂ ಜ್ಞಾನಾಸಿನಾಽತ್ಮನಃ ।**
**ಛಿತ್ತ್ವೈನಂ ಸಂಶಯಂ ಯೋಗಮಾತಿಷ್ಠೋತ್ತಿಷ್ಠ ಭಾರತ ॥**

'ಆದ್ದರಿಂದ ಅಜ್ಞಾನದಿಂದ ಹುಟ್ಟಿದ, ನಿನ್ನ ಮನಸ್ಸಿನಲ್ಲಿ ಅಡಗಿರುವ, ಆತ್ಮವಿಷಯಕವಾದ ಈ ಸಂಶಯವನ್ನು ಜ್ಞಾನವೆಂಬ ಕತ್ತಿಯಿಂದ ಕತ್ತರಿಸಿ, ಯೋಗವನ್ನು ಅನುಷ್ಠಾನ ಮಾಡು. ಎಲೈ ಅರ್ಜುನನೆ, ಯುದ್ಧಕ್ಕೆ ಸನ್ನದ್ಧನಾಗಿ ಏಳು.'

ಅರ್ಜುನನನ್ನು ಯುದ್ಧಕ್ಕೆ ಪ್ರವೃತ್ತನನ್ನಾಗಿ ಮಾಡಿ ಬಡಿದೆಬ್ಬಿಸುವುದು ಇಲ್ಲಿ ಸಾಂದರ್ಭಿಕ ಕಾರ್ಯವಾದರೆ, ಅಜ್ಞಾನದ ನಿದ್ರೆಯಲ್ಲಿ ಮಲಗಿರುವ ಮನುಷ್ಯನನ್ನು ಬಡಿದೆಬ್ಬಿಸಿ, ಆತ್ಮಸಾಕ್ಷಾತ್ಕಾರದ ಕಾರ್ಯಕ್ಕೆ ಪ್ರವೃತ್ತನನ್ನಾಗಿಸುವುದು, ವಿಶಾಲವಾದ ಅರ್ಥದಲ್ಲಿ ಭಗವಂತನ ಕಾರ್ಯ.

## ಧ್ಯಾನ-ಯೋಗ

ತಾತ್ತ್ವಿಕವಾಗಿ ಭಗವದ್ಗೀತೆಯು ಹಲವಾರು ವಿಷಯಗಳನ್ನು ತನ್ನ ಒಡಲಲ್ಲಿ ಅಡಗಿಸಿಕೊಂಡಿದೆ. ಅಥವಾ, ಹಲವು ಮೂಲಗಳ, ಹಲವಾರು ದರ್ಶನ-ತತ್ತ್ವಗಳ ಸಾರವನ್ನು ತನ್ನಲ್ಲಿ ಸಮನ್ವಯಗೊಳಿಸಿಕೊಂಡಿದೆ. ಆದರೆ, ಈ ತತ್ತ್ವವನ್ನು ನಮ್ಮ ದೈನಂದಿನ ಜೀವನದಲ್ಲಿ ಅನುಷ್ಠಾನಗೊಳಿಸುವುದು ಹೇಗೆ? ಈ ದಿಕ್ಕಿನಲ್ಲಿ ಕೂಡ ಭಗವದ್ಗೀತೆ ಅಸಾಧಾರಣ ರೀತಿಯಲ್ಲಿ ಹಲವು ಮಾರ್ಗಗಳನ್ನು ತೋರಿಸಿಕೊಡುತ್ತದೆ. ಇಂದ್ರಿಯಗಳ ನಿಗ್ರಹ ಮತ್ತು ಅದರ ಅಭ್ಯಾಸ –ಇದು ಮೊದಲ ಹಂತ. ಮನಸ್ಸು, ಬುದ್ಧಿ ಇವನ್ನು ಆತ್ಮನ (ಅಥವಾ ಭಗವಂತನ) ಕಡೆಗೆ ತಿರುಗಿಸಿ, ಅದರಲ್ಲೇ ಏಕಾಗ್ರಗೊಳಿಸುವುದು ಎರಡನೇ ಹಂತ. ಧ್ಯೇಯವಸ್ತುವನ್ನು ಬಿಟ್ಟು ಬೇರೇನನ್ನೂ ಚಿಂತಿ

ಸದೆ ಧ್ಯಾನಮಾಡುವುದು ಮೂರನೆಯ ಹಂತ. ಇವು ಮೂರನ್ನೂ ಸಾಧಿಸಿ ಯೋಗಮಾರ್ಗದಲ್ಲಿ ಮುಂದುವರಿಯುವ ಸಾಧಕನು, **‘ಸುಖೇನ ಬ್ರಹ್ಮಸಂಸ್ಪರ್ಶಂ ಅತ್ಯಂತಂ ಸುಖಮಶ್ನುತೇ.’** (ಅಂಥ ಯೋಗಿಯು ಆಯಾಸವಿಲ್ಲದೆ ಬ್ರಹ್ಮಸಂಸ್ಪರ್ಶವೆಂಬ ಉತ್ಕೃಷ್ಟವಾದ ಸುಖವನ್ನು ಹೊಂದುತ್ತಾನೆ.’) *(ಗೀತೆ, ೬.೨೮)*

ಈ ರೀತಿ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳವುದು ಹೇಗೆ ಎಂದು ಸಹಜವಾಗಿ ಕೇಳುತ್ತಾನೆ ಅರ್ಜುನ. ಎಲ್ಲರಂತೆ ಅವನೂ ಮನುಷ್ಯನೇ. ಸುಖ, ದುಃಖಗಳೆಂಬ ದ್ವಂದ್ವಗಳಿಗೆ ಅವನೂ ಒಳಗಾದವನು. ಮನಸ್ಸಿನ ವಿಕಾರಗಳಿಗೆ, ರಾಗದ್ವೇಷಗಳಿಗೆ ತುತ್ತಾದವನು. ಚಂಚಲವಾದ ಮನಸ್ಸನ್ನು ನಿಗ್ರಹಿಸುವುದು ಅತ್ಯಂತ ಕಷ್ಟವೆಂಬುದು ಅವನ ಅನುಭವ. ಅದಕ್ಕೆ ಶ್ರೀಕೃಷ್ಣ ಉತ್ತರಿಸುತ್ತಾನೆ – ‘ನಿಜ, ಮನಸ್ಸನ್ನು ನಿಗ್ರಹಿಸುವುದು ಅತ್ಯಂತ ಕಷ್ಟಕರವಾದುದ್ದು. ಆದರೆ, ಅಭ್ಯಾಸದಿಂದಲೂ, ವೈರಾಗ್ಯದಿಂದಲೂ ಅದನ್ನು ನಿಗ್ರಹಿಸಬಹುದು.’ *(ಗೀತೆ, ೬.೩೫)*

ಅಷ್ಟೇ ಅಲ್ಲ, ಮನಸ್ಸನ್ನು ಸ್ವಾಧೀನಪಡಿಸಿಕೊಳ್ಳುವಾಗ ಹಲವು ಬಗೆಯ ಸಮಸ್ಯೆ, ಗೊಂದಲ, ಸವಾಲುಗಳು ಎದುರಾಗುತ್ತವೆ. ಅವೆಲ್ಲವಕ್ಕೂ ಪರಿಹಾರವನ್ನಿಲ್ಲಿ ನೀಡಲಾಗಿದೆ. ಎಷ್ಟು ಬಾರಿ ಮನಸ್ಸು ಚಂಚಲಗೊಂಡರೂ, ಮತ್ತೆ ಮತ್ತೆ ಅದನ್ನು ಎಳೆದುತಂದು ಧ್ಯಾನಿಸುವ ವಸ್ತುವಿನಲ್ಲಿಡಬೇಕು. ಪ್ರಯತ್ನದಲ್ಲಿ ಗೊಂದಲ, ಅವಸರ ವಿರಬಾರದು. **‘ಶನೈಃ ಶನೈರುಪರಮೇತ್’** – ನಿಧಾನವಾಗಿ ಮುಂದುವರಿಯಬೇಕು.

ಹೀಗೆ ಧ್ಯಾನಿಸುತ್ತ ಸಾಧಕನು ಒಂದು ಹಂತದಲ್ಲಿ ಆತ್ಮದರ್ಶನವನ್ನು, ಅಂದರೆ ತನ್ನ ನೈಜಸ್ವರೂಪವಾದ ಪರಮಾತ್ಮನ ಸಾಕ್ಷಾತ್ಕಾರವನ್ನು ಹೊಂದುತ್ತಾನೆ. ಆಗ ಅವನು ಸಮದರ್ಶನವನ್ನು ಹೊಂದುತ್ತಾನೆ; ಎಲ್ಲ ಜೀವಿಗಳಲ್ಲೂ ಆತ್ಮವನ್ನೇ ಕಾಣುತ್ತಾನೆ, ಎಲ್ಲೆಡೆ ಆತ್ಮವನ್ನೇ ಕಾಣುತ್ತಾನೆ. ಇದು ಆತ್ಯಂತಿಕವಾದ ಅನುಭವ. ಈ ಸ್ಥಿತಿಯನ್ನು ಹೊಂದುವ ಪಥದಲ್ಲಿ ಯೋಗಿ ಎಡವಿ ಬೀಳಬಹುದು, ಪತಿತನಾಗಬಹುದು. ಇಂಥ ಸಂಭವವಿದ್ದೇ ಇದೆ – ಆದರೆ ಅದರಿಂದ ವಿಚಲಿತನಾಗಬೇಕಿಲ್ಲ. ಯೋಗಭ್ರಷ್ಟನು ಕೂಡ ತನ್ನ ಮುಂದಿನ ಜನ್ಮದಲ್ಲಿ ತನ್ನ ಸಾಧನೆಯನ್ನು ಎಲ್ಲಿ ನಿಲ್ಲಿಸಿದ್ದನೋ – ಅಲ್ಲಿಂದ ಮುಂದುವರಿಸುವನು. ಇದು ಶ್ರೀಕೃಷ್ಣನು ಸಾಧಕರಿಗೆ ನೀಡಿರುವ ದೊಡ್ಡ ಭರವಸೆ. ಈ ರೀತಿ ಧ್ಯಾನ-ಯೋಗದ ಮಾರ್ಗವನ್ನು ಗೀತೆಯಲ್ಲಿ ಅತ್ಯಂತ ಪ್ರಾಯೋಗಿಕವಾಗಿ ವಿವರಿಸಲಾಗಿದೆ.

### ಭಕ್ತಿಯೆಂಬ ಅಮೃತ

ವೇದ, ಉಪನಿಷತ್ತುಗಳಲ್ಲಿ ಉಪಾಸನೆ, ಉದ್ಗೀಥ, ಕಥಾನಕಗಳಲ್ಲಿ ಭಕ್ತಿಯ ಉಗಮವನ್ನು ನಾವು ಕಾಣಬಹುದಾದರೂ, ಅದು ಉತ್ಕರ್ಷವನ್ನು ಕಾಣುವುದು ಭಗವದ್ಗೀತೆಯಲ್ಲಿ. ಶ್ರೀಕೃಷ್ಣನು ತನ್ನ ಅಸಾಧಾರಣ ಜೀವನದ ಮೂಲಕವೂ, ಭಗವದ್ಗೀತೆಯ ಉಪದೇಶದ ಮೂಲಕವೂ ಭಕ್ತಿಯೆಂದರೆ ಏನು ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟಿದ್ದಾನೆ. ಕೃಷ್ಣನ ಬಾಲ್ಯಕಾಲದಲ್ಲಿ ಗೋಪೀಭಾವ, ರಾಧಾಭಾವ, ವಾತ್ಸಲ್ಯಭಾವದ ಮೂರ್ತರೂಪವಾದ ಯಶೋದೆಯ ಭಕ್ತಿ — ಇವೆಲ್ಲ ಭಕ್ತಿಗೆ ಜೀವಂತ ನಿದರ್ಶನಗಳು. ಹೇಗೆ ಅವನು ಭಕ್ತವತ್ಸಲನೋ, ಅದೇ ರೀತಿ ಭಕ್ತಿಯನ್ನು ಬೋಧಿಸುವ ಆಚಾರ್ಯನೂ ಆಗಿದ್ದಾನೆ – ಇದು ವ್ಯಕ್ತವಾಗುವುದು ಗೀತೆಯಲ್ಲಿ. ‘ಭಕ್ತಿಯೋಗ’ವೆಂಬ ಒಂದು ಅಧ್ಯಾಯವೇ ಗೀತೆಯಲ್ಲಿದೆ; ಇಲ್ಲಿ ಮಾತ್ರವಲ್ಲದೆ, ಇತರ ಹಲವು ಅಧ್ಯಾಯಗಳಲ್ಲೂ ಭಕ್ತಿಯ ವಿವಿಧ ಲಕ್ಷಣಗಳು, ಅದನ್ನು ಆಚರಿಸುವ ಬಗೆಗಳನ್ನು ವಿವರಿಸಲಾಗಿದೆ. ಹತ್ತಾರು ಭಾವಗಳು ಭಕ್ತಿಯಲ್ಲಿ ಸಮಾಗಮ ಹೊಂದುತ್ತವೆ. ಹಲವು ರೀತಿಯ ಕ್ರಿಯೆಗಳು ಭಕ್ತಿಯ ಅಂಗವಾಗಿ ಮಾರ್ಪಡುತ್ತವೆ. ಶ್ರದ್ಧೆ, ಶರಣಾಗತಿ, ಅನನ್ಯಭಾವದಿಂದ ಭಗವಂತನನ್ನು ಭಜಿಸುವವರಿಗೆ ಭಗವಂತನ ಕೃಪೆ ಲಭಿಸುತ್ತದೆ. ಅಂಥ ಸಾಧಕನ ಯೋಗಕ್ಷೇಮವನ್ನು ಭಗವಂತನೇ ವಹಿಸಿಕೊಳ್ಳುತ್ತಾನೆ.

ಗೀತೆಯಲ್ಲಿ ಬರುವ ಭಕ್ತಿಯೋಗದ ಸಾರವನ್ನು ಈ ಎರಡು ಶ್ಲೋಕಗಳಲ್ಲಿ ಕಾಣಬಹುದು: *(೯.೨೨ ಮತ್ತು ೯.೩೪)*

**ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।**
**ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥**

**ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।**
**ಮಾಮೇವೈಷ್ಯಸಿ ಯುಕ್ತ್ವೈವಂ ಆತ್ಮಾನಂ ಮತ್ಪರಾಯಣಃ ॥**

‘ಅನನ್ಯರಾಗಿ ನನ್ನನ್ನು ಧ್ಯಾನಿಸುತ್ತಿರುವ ಯಾವ ಜನರು ಉಪಾಸನೆ ಮಾಡುತ್ತಾರೆಯೋ, ಅಂತಹ ನಿತ್ಯಯುಕ್ತರಾದ ಭಕ್ತರ ಯೋಗಕ್ಷೇಮವನ್ನು ನಾನು ವಹಿಸಿಕೊಳ್ಳುತ್ತೇನೆ.’

‘ನನ್ನಲ್ಲಿಯೇ ಮನಸ್ಸನ್ನಿಡು, ನನ್ನ ಭಕ್ತನಾಗಿರು. ನನ್ನನ್ನು ಪೂಜಿಸುವವನಾಗಿರು. ನನ್ನನ್ನು ನಮಸ್ಕರಿಸು. ಹೀಗೆ ನಾನೇ ಪರಮಗತಿಯೆಂದು ತಿಳಿದುಕೊಂಡು, ನನ್ನಲ್ಲಿ ಮನಸ್ಸನ್ನು ನಿಲ್ಲಿಸಿ, ನನ್ನನ್ನೇ ಹೊಂದುವೆ.’

ಪರಮಾತ್ಮನ ನೆಲೆ, ಅವನ ಲಕ್ಷಣ, ಅವನ ಸ್ವರೂಪ ಮುಂತಾದುವನ್ನು ಹಲವೆಡೆ ತಾತ್ತ್ವಿಕವಾಗಿ ವಿವರಿಸಿದ್ದರೂ, ಅವನನ್ನು ಪಡೆಯುವ ಬಗೆ ಹೇಗೆ ಎಂಬುದನ್ನು ಅದಕ್ಕಿಂತ ಹೆಚ್ಚು ಮುಖ್ಯವಾಗಿ ವಿವರಿಸಿರುವುದು ಭಗವದ್ಗೀತೆಯನ್ನು ಇನ್ನಷ್ಟು ಪ್ರಸ್ತುತಗೊಳಿಸುತ್ತದೆ. ಎಲ್ಲ ಕಾಲಕ್ಕೆ, ಎಲ್ಲ ಸನ್ನಿವೇಶಗಳಲ್ಲಿ ಹಾಗೂ ವಿಶ್ವವ್ಯಾಪಕವಾದ ನೆಲೆಗಟ್ಟಿನಲ್ಲಿ ಗೀತಾವಾಕ್ಯಗಳನ್ನು ಅರ್ಥೈಸಿಕೊಳ್ಳಬಹುದು; ಜೀವನರಂಗದಲ್ಲಿ ಅಳವಡಿಸಿಕೊಳ್ಳಬಹುದು. ಭಗವದ್ಗೀತೆ ವಿಶ್ವಮಾನ್ಯವಾಗಿರುವುದು ಅದರ ವಿಶ್ವವ್ಯಾಪಕ ದೃಷ್ಟಿಕೋನದಿಂದ ಹಾಗೂ ವೈವಿಧ್ಯಮಯ-ಪ್ರಾಯೋಗಿಕ ಸಾಧನ ಮಾರ್ಗಗಳಿಂದ. ಭಗವದ್ಗೀತೆಯೊಂದೇ ಭಾರತೀಯ ಸನಾತನ ಧರ್ಮದ ಶ್ರೇಷ್ಠ ಪ್ರತಿನಿಧಿಯೆನ್ನಬಹುದು.

### ಸೆಪ್ಟೆಂಬರ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೦೬ | ಬುಧವಾರ | ಶ್ರೀಕೃಷ್ಣ ಜನ್ಮಾಷ್ಟಮಿ |
| ೧೦ | ಶನಿವಾರ | ಏಕಾದಶಿ |
| ೧೩ | ಬುಧವಾರ | ಸ್ವಾಮಿ ಅದ್ವೈತಾನಂದ ಜಯಂತಿ |
| ೧೮ | ಸೋಮವಾರ | ಗಣೇಶ ಚತುರ್ಥಿ |
| ೨೫ | ಸೋಮವಾರ | ಏಕಾದಶಿ |